**ದಿನಾಂಕ 11/12/2020 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಜೆ.ಯು.ಆರ್. ವಕೀಲರಿಂದ**

ನಾನು ಕೆ.ಎಸ್.ಆರ್.ಟಿ.ಸಿ ಇಲಾಖೆಯಲ್ಲಿ ಬಸ್ ನಿರ್ವಾಹಕನಾಗಿ ಕೆಲಸ ಮಾಡಿ ನಿವೃತ್ತಿ ಹೊಂದಿದ್ದೇನೆ. 20 ವರ್ಷಗಳ ಹಿಂದೆ ನಿವೃತ್ತಿ ಹೊಂದಿದ್ದೇನೆ. ಆಗಿನಿಂದ ಊರಿನಲ್ಲಿ ವಾಸವಾಗಿದ್ದೇನೆ ಎಂದರೆ ಸರಿ. ನನ್ನ ತಂದೆಗೆ ಒಟ್ಟು 8 ಎಕರೆ 10 ಗುಂಟೆ ಜಮೀನು ಇತ್ತು. ನಾನು ಮತ್ತು ನನ್ನ ತಮ್ಮನಾದ ವಾದಿ ಒಂದೇ ಊರಿನಲ್ಲಿ ಬೇರೆ ಬೇರೆ ಮನೆಗಳಲ್ಲಿ ವಾಸವಾಗಿದ್ದೇವೆ ಎಂದರೆ ಸರಿ. ಆ ರೀತಿ ಬೇರೆಯಾಗಿ ವಾಸ ಮಾಡುತ್ತಿದ್ದು, ಸುಮಾರು 25 ವರ್ಷಗಳಾಗಿರಬಹುದು ಎಂದರೆ ಸರಿ. ಸದರಿ ಮನೆಗಳು ನಮ್ಮ ಪ್ರತ್ಯೇಕ ಹೆಸರಿಗೆ ಖಾತೆಯಾಗಿವೆ ಎಂದರೆ ಸರಿ.

ನಾನು ದಾವಾ ಜಮೀನುಗಳ ಪಹಣಿ ತೆಗೆಸಿ ನೋಡಿಲ್ಲ. ಸಾಕ್ಷಿ ಸದರಿ ಜಮೀನುಗಳು ನನ್ನ ಹೆಸರಿನಲ್ಲಿ ಇಲ್ಲ ಎಂದು ನುಡಿಯುತ್ತಾರೆ. ವಾದಿಯ ಹೆಸರಿನಲ್ಲಿವೆ ಎಂದರೆ ಸರಿ. ಸಾಕ್ಷಿ ಮುಂದುವರಿದು ಮೋಸದಿಂದ ಅವರ ಹೆಸರಿಗೆ ಮಾಡಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ವಾದಿಯ ಹೆಸರಿಗೆ ಖಾತೆಯಾಗಿರುವುದನ್ನು ರದ್ದುಪಡಿಸಲು ತಹಶೀಲ್ದಾರ್ ಕಚೇರಿಗೆ ಅರ್ಜಿ ನೀಡಿದ್ದೆನು. ಸ್ವಲ್ಪ ದಿನ ಮಾತ್ರ ನಾನು ದಾವಾ ಜಮೀನಿಗೆ ಕಂದಾಯ ಪಾವತಿ ಮಾಡಿದ್ದೇನೆ. 2001 ರಲ್ಲಿ ವಿಭಾಗ ಆಗಿರುವುದಾಗಿ ನೀವು ತಿಳಿಸಿದ್ದು, ಸದರಿ ವಿಭಾಗದಂತೆ ನಿಮ್ಮ ಹೆಸರಿಗೆ ಖಾತೆ ಮಾಡಿಸಿಕೊಂಡಿದ್ದೀರಾ ಎಂದರೆ ಸಾಕ್ಷಿ ವಾದಿ ಖಾತೆಗೆ ಸಹಿ ಮಾಡಿಕೊಟ್ಟಿಲ್ಲ ಎಂದು ನುಡಿಯುತ್ತಾರೆ.

ವಾದಿ ದಾವಾ ಜಮೀನು ಆಧಾರವಾಗಿಟ್ಟು ಹಳ್ಳಿಮೈಸೂರು ಬ್ಯಾಂಕಿನಿಂದ 6 ಲಕ್ಷ ಸಾಲ ಪಡೆದುಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಈ ಹಿಂದೆ ಶ್ರೀ ಡಿ.ಶಿವಮೂರ್ತಿ ವಕೀಲರ ಮೂಲಕ 3 ದಾವೆಗಳನ್ನು ಸಲ್ಲಿಸಿದ್ದೆನು ಎಂದರೆ ಸರಿ. ಸದರಿ ದಾವೆಗಳು ವಜಾ ಆಗಿವೆ ಎಂದರೆ ಸಾಕ್ಷಿ ನನಗೆ ಹುಷಾರಿಲ್ಲದ ಕಾರಣ ನ್ಯಾಯಾಲಯಕ್ಕೆ ಬಂದಿರಲಿಲ್ಲ ಎಂದು ನುಡಿಯುತ್ತಾರೆ. ದಾವಾ ಆಸ್ತಿಗಳನ್ನು ಸೇರಿಸಿ ಅ.ದಾವಾ ಸಂಖ್ಯೆ 200/2015 ರಲ್ಲಿ ಹಿಸ್ಸೆಗಾಗಿ ದಾವೆ ಸಲ್ಲಿಸಿದ್ದೆನು ಹಾಗೂ ಅದು ವಜಾ ಆಗಿದೆ ಎಂದರೆ ಸರಿ. ಅದೇ ರೀತಿ ನಾನು ಅ.ದಾವಾ 298/15 ರಲ್ಲಿ ಶಾಶ್ವತ ನಿರ್ಬಂಧಕಾಜ್ಞೆಗಾಗಿ ಸಲ್ಲಿಸಿದ್ದ ದಾವೆ ಸಹ ವಜಾ ಆಗಿದೆ ಎಂದರೆ ಸರಿ. ನಾನು ಅ.ದಾವಾ ಸಂಖ್ಯೆ 208/2015 ರಲ್ಲಿ ಹಿಸ್ಸೆ ಮತ್ತು

ಘೋಷಣೆಗಾಗಿ ಸಲ್ಲಿಸಿದ್ದ ಇನ್ನೊಂದು ದಾವೆಯು ಸಹ ವಜಾ ಆಗಿದೆ ಎಂದರೆ ಸರಿ. 20 ವರ್ಷಗಳಿಂದ ದಾವಾ ಜಮೀನುಗಳ ಎಲ್ಲಾ ದಾಖಲಾತಿಗಳು ವಾದಿಯ ಹೆಸರಿನಲ್ಲಿವೆ ಎಂದರೆ ಸಾಕ್ಷಿ ಮೋಸದಿಂದ ಮಾಡಿಕೊಂಡಿದ್ದಾರೆ ಎಂದು ನುಡಿಯುತ್ತಾರೆ.

ನೀವು ಮತ್ತು ವಾದಿ ದಿಃ 12.12.1996 ರಂದು ವಿಭಾಗ ಮಾಡಿಕೊಂಡಿದ್ದೀರಿ ಎಂದರೆ ಸಾಕ್ಷಿ 2001 ರಲ್ಲಿ ವಿಭಾಗ ಮಾಡಿಕೊಂಡಿದ್ದೇವೆ ಎಂದು ನುಡಿಯುತ್ತಾರೆ. ಸದರಿ 1996 ರ ವಿಭಾಗದಂತೆ ದಾವಾ ಜಮೀನುಗಳು ವಾದಿಯ ಪಾಲಿಗೆ ಬಂದಿದ್ದು ಅವರ ಹೆಸರಿಗೆ ಖಾತೆಯಾಗಿದೆ ಎಂದರೆ ಸಾಕ್ಷಿ ಮೋಸದಿಂದ ಮಾಡಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ವಾದಿ ನನಗೆ ಮೋಸ ಮಾಡಿದ್ದಾರೆ ಎಂದು ಠಾಣೆಗೂ ಸಹ ದೂರು ಸಲ್ಲಿಸಿದ್ದೆನು. ವಾದಿಗೆ ವಿಭಾಗದಲ್ಲಿ ಜಮೀನು ನೀಡಿದ್ದು, ಆ ಪ್ರಕಾರ ಅವರು ಸ್ವಾಧೀನಲ್ಲಿರುವ ದಾವಾ ಜಮೀನಿಗೆ ನಾನು ತೊಂದರೆ ನೀಡುತ್ತಿದ್ದೇನೆ ಎಂದರೆ ಸರಿಯಲ್ಲ. 2001 ರಲ್ಲಿ ನನ್ನ ಮತ್ತು ವಾದಿಯ ನಡುವೆ ಯಾವುದೇ ವ್ಯವಹಾರ ಆಗಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.

ಓ.ಹೇ.ಕೇ.ಸ.ಇ.

ಜೆಎಂಎಫ್‌ಸಿ., ಹೊಳೆನರಸೀಪುರ.